RNU AIR DHARWAD

# AUGUST 25, 2024

## AKASHAVANI - DHARWAD

## PRADESH SAMACHARA (KANNADA) 07.05 AM

**ಮುಖ್ಯಾಂಶಗಳು:**

- ಭಾರತೀಯ ಪಾರಂಪರಿಕ ಆಹಾರ ಪದ್ಧತಿ ಪಾಲನೆಯಿಂದ, ಆರೋಗ್ಯ ವೃದ್ಧಿ – ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್.
- ಮುಟ್ಟಿನ ಶುಚಿತ್ವಕ್ಕೆ ಆದ್ಯತೆ ನೀಡಲು, ರಾಜ್ಯಾದ್ಯಂತ ಶುಚಿ ಯೋಜನೆ ಜಾರಿಗೆ ಚಿಂತನೆ – ದಿನೇಶ್ ಗುಂಡೂರಾವ್.
- ಕನ್ನಡದಲ್ಲಿ ಅಧಿಕೃತ ಆರೋಗ್ಯ ನಿಘಂಟಿನ ರಚನೆಯಾಗಲಿ – ಡಾಕ್ಟರ್ ನಾ. ಸೋಮೇಶ್ವರ.
- ಇಂದು ಬೆಳಗ್ಗೆ 11 ಗಂಟೆಗೆ, ಪ್ರಧಾನಮಂತ್ರಿಯವರ, 'ಮನ್ ಕಿ ಬಾತ್'.

<><><>

**ಈಗ ವಾರ್ತೆಗಳ ವಿವರ**

ಆಹಾರದ ಅನನ್ಯತೆ ಮತ್ತು ಪೌಷ್ಟಿಕಾಂಶದ ಮೌಲ್ಯವನ್ನು ಮರೆತ ಹಿನ್ನೆಲೆ, ಆಧುನಿಕ ಜೀವನ ಶೈಲಿ ರೋಗಗಳು ಉಲ್ಬಣಿಸುತ್ತಿವೆ. ಭಾರತದ ಹಳೆಯ ಆಹಾರ ಪದ್ಧತಿ ಅಳವಡಿಸಿಕೊಂಡಲ್ಲಿ, ಆರೋಗ್ಯ ಕಾಪಾಡಿಕೊಳ್ಳಬಹುದು ಎಂದು, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಹೇಳಿದ್ದಾರೆ. ದೀನ ದಯಾಳ ಉಪಾಧ್ಯಾಯ ಗ್ರಾಮೀಣ ಸಂಶೋಧನಾ ಸಂಸ್ಥೆ ಹೊರತಂದ, ಪೋ ’ಣ್ ಉತ್ಸವ್ ಪುಸ್ತಕವನ್ನು, ರಾಜಭವನದಲ್ಲಿ ಬಿಡುಗಡೆ ಮಾಡಿ, ಮಾತನಾಡಿದರು. 26 ರಾಜ್ಯಗಳಿಂದ ಮಾಹಿತಿ ಸಂಗ್ರಹಿಸಿ, ಜನಸಾಮಾನ್ಯರಿಂದ ಅವರ ಜಾನಪದ ಸಂಸ್ಕೃತಿಯ ಜ್ಞಾನ ಕ್ರೋಢೀಕರಿಸಿ, ಪುಸ್ತಕದಲ್ಲಿ ಪ್ರಕಟಿಸಲಾಗಿದೆ. ನಿರೋಗಿ ಆಹಾರ ಪದ್ಧತಿಯ ಭಾಂಡಾರ ಅನಾವರಣಗೊಂಡಿದೆ ಎಂದು ರಾಜ್ಯಪಾಲರು ತಿಳಿಸಿದರು. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ದೀನದಯಾಳ್ ಸಂಶೋಧನಾ ಸಂಸ್ಥೆಯ ಅತುಲ್ ಜೈನ್ ಸೇರಿದಂತೆ, ಗಣ್ಯರು ಪಾಲ್ಗೊಂಡಿದ್ದರು.

<><><>

ಮುಟ್ಟಿನ ಶುಚಿತ್ವಕ್ಕೆ ಆದ್ಯತೆ ನೀಡುವ ಉದ್ದೇಶದಿಂದ, ಶುಚಿ ಯೋಜನೆ ಜಾರಿಗೊಳಿಸಿದ್ದಾಗಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. ಪ್ರಾಯೋಗಿಕವಾಗಿ, ಮಂಗಳೂರು ಮತ್ತು ಚಾಮರಾಜನಗರ ಜಿಲ್ಲೆಗಳ, 25 ಸಾವಿರ ಹೆಣ್ಣು ಮಕ್ಕಳಿಗೆ ಮುಟ್ಟಿನ ಕಪ್ ವಿತರಿಸಲಾಗಿದೆ. ಈ ಯೋಜನೆ ಯಶಸ್ವಿಯಾಗಿದ್ದು, ರಾಜ್ಯಾದ್ಯಂತ ವಿಸ್ತರಿಸಲು ಚಿಂತನೆ ನಡೆಸಿದ್ದೇವೆ ಎಂದು ಅವರು, ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪ್ರಕಟಿಸಿದ್ದಾರೆ.

<><><>

ಸ್ನಾತಕೋತ್ತರ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸೂಪರ್ ಸ್ಪೆ ಾಲಿಟಿ ಆಸ್ಪತ್ರೆಗಳಲ್ಲಿ ವ್ಯಾಸಂಗ ಮಾಡುತ್ತಿರುವ, ವೈದ್ಯ ವಿದ್ಯಾರ್ಥಿಗಳು ಮತ್ತು ಸೀನಿಯರ್ ರೆಸಿಡೆಂಟ್ ವೈದ್ಯರ ಶಿ ’ವೇತನವನ್ನು, ಶೇಕಡ 25ರ ಷ್ಟು ಹೆಚ್ಚಿಸಿ, ಆದೇಶ ಹೊರಡಿಸಲಾಗಿದೆ ಎಂದು, ವೈದ್ಯಕೀಯ ಶಿಕ್ಷಣ ಖಾತೆ ಸಚಿವ ಡಾಕ್ಟರ್ ಶರಣಪ್ರಕಾಶ ಪಾಟೀಲ, ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ, ಪ್ರಕಟಿಸಿದ್ದಾರೆ.

<><><>

ದ್ವಿದಳ ಧಾನ್ಯ ಬೆಳೆಗಳ ಉತ್ಪಾದನೆ ಹಾಗೂ ಅಧಿಕ ಇಳುವರಿ ಕೊಡುವ ತಳಿಗಳ ಬಿತ್ತನೆಗೆ, ರೈತರು ಹೆಚ್ಚು ಆಸಕ್ತಿ ತೋರಬೇಕೆಂದು, ದಾವಣಗೆರೆ ಕೃಷಿ ವಿಜ್ಞಾನ ಕೇಂದ್ರದ ಬೇಸಾಯ ತಜ್ಞ ಡಾಕ್ಟರ್ ಮಲ್ಲಿಕಾರ್ಜುನ ಮನವಿ ಮಾಡಿದ್ದಾರೆ. ತರಳಬಾಳು ಕೃಷಿ ವಿಜ್ಞಾನ ಕೇಂದ್ರ ಹಾಗೂ ಚನ್ನಗಿರಿ ಕೃಷಿ ಇಲಾಖೆ ಸಹಯೋಗದಲ್ಲಿ, ಮಾದಾಪುರ ಗ್ರಾಮದಲ್ಲಿ, ಡ್ರೋನ್ ಮೂಲಕ ತೊಗರಿ ಬೆಳೆಗೆ ಔಷಧಿ ಸಿಂಪಡಣೆಗೆ ಚಾಲನೆ ನೀಡಿ, ಅವರು ಮಾತನಾಡಿದರು. ಕೃಷಿಯಲ್ಲಿ ಡ್ರೋನ್ ಬಳಕೆಯಿಂದ, ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಬಹುದು. ಹೆಚ್ಚು ಇಳುವರಿ ಪಡೆಯಲು ಸಹ ಸಾಧ್ಯ. ಕೃಷಿ ಕೂಲಿ ಕಾರ್ಮಿಕರ ಸಮಸ್ಯೆ ನಿವಾರಣೆಗೆ ಇದು ಉಪಾಯ ಎಂದು, ಮಲ್ಲಿಕಾರ್ಜುನ ಹೇಳಿದರು.

<><><>

ವಾಡಿಕೆಗಿಂತ ಅಧಿಕ ಮಳೆಯಾದ ಹಿನ್ನೆಲೆ, ಉತ್ತರಕನ್ನಡ ಜಿಲ್ಲೆಯ ಅಡಕೆ ಮತ್ತು ಕಾಳು ಮೆಣಸು ಬೆಳೆಗಾರರು, ತೀವ್ರ ಸಂಕಷ್ಟಕ್ಕೆ ಈಡಾಗಿದ್ದು, ಕೂಡಲೇ ಸಹಾಯ ಧನ ಬಿಡುಗಡೆ ಮಾಡುವಂತೆ. ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಮುಖ್ಯಮಂತ್ರಿಯವರಿಗೆ ಪತ್ರ ಬರೆದು, ಒತ್ತಾಯಿಸಿದ್ದಾರೆ. ಎಲೆ ಚುಕ್ಕೆ ರೋಗ ಹಾಗೂ ಕೊಳೆ ರೋಗ ಬಾಧೆ ಹೆಚ್ಚಿರುವ ಹಿನ್ನೆಲೆ, ಬೆಳೆ ಹಾನಿ ಪರಿಹಾರ ಮತ್ತು ಔ ’ಧಿ ಸಿಂಪಡಣೆಗೆ ಅಗತ್ಯವಿರುವ, ಮೈಲುತುತ್ತಕ್ಕೆ ಸಹಾಯ ಧನ ನೀಡುವಂತೆ, ಕಾಗೇರಿ ಅವರು ಮನವಿ ಮಾಡಿದ್ದಾರೆ.

<><><>

ತುಮಕೂರು ಜಿಲ್ಲೆ ಗುಬ್ಬಿ ತಾಲೂಕು ಚೇಳೂರು ಹೋಬಳಿಯ, ರೈತ ಪರಮೇಶ, ಕೆಂಪು ಸೊಳೆಯ ಸಿದ್ದು ಹಲಸು ಗಿಡಗಳನ್ನು ಕಸಿ ಮಾಡಿ, ದಕ್ಷಿಣ ಭಾರತದ ಆಸಕ್ತ ರೈತರಿಗೆ ನೀಡಿದ, ಖ್ಯಾತಿ ಗಳಿಸಿದ್ದಾರೆ. ಕೆಂಪು ತಳಿ ಪ್ರಧಾನ ಹಲಸನ್ನು ಕಸಿ ಮಾಡುವ ನರ್ಸರಿ ಮಾಡಿಕೊಂಡು, 20 ಕುಟುಂಬಗಳಿಗೆ ಉಪಜೀವನಕ್ಕೆ ಆಸರೆಯಾಗಿದ್ದಾರೆ. ಒಂದು ಲಕ್ಷ 40 ಸಾವಿರಕ್ಕೂ ಹೆಚ್ಚು ಕೆಂಪು ಹಲಸಿನ ಸಸಿಗಳನ್ನು ರವಾನಿಸಿ, ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯಿಂದ, 40 ಲಕ್ಷ ರಾಯಧನ ಪಡೆದ ಕೃಷಿ ಉದ್ಯಮಿ ಪರಮೇಶ. ಪ್ರದೇಶ ಸಮಾಚಾರಕ್ಕಾಗಿ ಪರಮೇಶ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

<u>ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..</u>

<><><>

ಉತ್ತರಕನ್ನಡ ಜಿಲ್ಲೆಯಲ್ಲಿ ಗುಡ್ಡ ಕುಸಿತದ ಲಕ್ಷಣಗಳನ್ನು ಪರಿಶೀಲಿಸಲು, ತರಬೇತಿ ಪಡೆದ ಸ್ಪಾಟರ್ಸ್‌ಗಳನ್ನು ನೇಮಿಸಲಾಗಿದ್ದು, ತಕ್ಷಣ ಜಿಲ್ಲಾ ವಿಪತ್ತು ನಿರ್ವಹಣಾ ನಿಯಂತ್ರಣ ಕೊಠಡಿಗೆ, ಮಾಹಿತಿ ನೀಡುವ ವ್ಯವಸ್ಥೆ ರೂಪಿಸಲಾಗಿದೆ ಎಂದು, ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯಾ ತಿಳಿಸಿದ್ದಾರೆ. ಕಾರವಾರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಸ್ಪಾಟರ್ಸ್‌ಗಳಿಗೆ ಆಯೋಜಿಸಿದ್ದ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ, ಅವರು ಮಾತನಾಡಿದರು. ಶಿರೂರು ಗುಡ್ಡ ಕುಸಿತದ ಅನಾಹುತದ ಹಿನ್ನೆಲೆ, ಅಗತ್ಯ ಮುನ್ನೆಚ್ಚರಿಕೆ ವಹಿಸಿ, ಜೀವ ಹಾನಿ ತಪ್ಪಿಸಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು, ಅವರು ಹೇಳಿದರು. ಭಾರತೀಯ ಭೂ ಸರ್ವೇಕ್ಷಣಾ ಸಂಸ್ಥೆಯಿಂದ, ಜಿಲ್ಲೆಯಾದ್ಯಂತ ಈಗಾಗಲೇ, 439 ಗುಡ್ಡ ಕುಸಿತದ ಸಂಭಾವ್ಯ ಪ್ರದೇಶಗಳನ್ನು ಗುರುತಿಸಲಾಗಿದೆ. ಭೂ ವಿಜ್ಞಾನಿಗಳ ಮೂಲಕ ಸಂಬಂಧಿತ ಇಲಾಖೆಗಳ ಸಿಬ್ಬಂದಿಗೆ ತರಬೇತಿ ನೀಡಲಾಗಿದೆ ಎಂದರು.

<><><>

ಹೈದರಾಬಾದ್‌ನ ಭಾರತೀಯ ಭೂ ಸರ್ವೇಕ್ಷಣಾ ಸಂಸ್ಥೆ, ಉಪ ಮಹಾ ನಿರ್ದೇಶಕ ಹಾಗೂ ಪ್ರಾದೇಶಿಕ ಮಿ ಽನ್ ಮುಖ್ಯಸ್ಥ ಕೆ.ವಿ. ಮಾರುತಿ ಮಾತನಾಡಿ, ಭೂ ಕುಸಿತ ಸ್ಥಳಗಳನ್ನು ವೈಜ್ಞಾನಿಕವಾಗಿ ಪರಿಶೀಲಿಸಿ, ಮುನ್ನೆಚ್ಚರಿಕೆ ನೀಡುವ ಕಾರ್ಯವನ್ನು ನೋಡಲ್ ಏಜೆನ್ಸಿಯಾಗಿ ಜಿ.ಐ.ಎಸ್ ಸಂಸ್ಥೆಯು ಕಾರ್ಯನಿರ್ವಹಿಸುತ್ತಿದೆ ಎಂದರು.

<><><>

ಕನ್ನಡದಲ್ಲಿ ಅಧಿಕೃತ ಹಾಗೂ ಸಮಗ್ರವಾದ, ಆರೋಗ್ಯ ನಿಘಂಟಿನ ರಚನೆಯಾಗಬೇಕು ಎಂದು, ಖ್ಯಾತ ವೈದ್ಯ ಸಾಹಿತಿ, ಡಾಕ್ಟರ್ ನಾ. ಸೋಮೇಶ್ವರ ಹೇಳಿದ್ದಾರೆ. ಕನ್ನಡ ವೈದ್ಯ ಬರಹಗಾರರ ಸಮಿತಿ, ಬೆಳಗಾವಿಯಲ್ಲಿ ಆಯೋಜಿಸಿರುವ ಎರಡು ದಿನಗಳ, ವೈದ್ಯ ಬರಹಗಾರರ ಐದನೇ ರಾಜ್ಯ ಮಟ್ಟದ ಸಮ್ಮೇಳನದ, ಸರ್ವಾಧ್ಯಕ್ಷತೆ ವಹಿಸಿ, ಮಾತನಾಡಿದರು.

ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ, ಖ್ಯಾತ ಸಾಹಿತಿ ಜಯಂತ್ ಕಾಯ್ಕಿಣಿ, ಶಿವರಾಮ ಕಾರಂತರು ಒಬ್ಬ ಬರಹಗಾರರಾಗಿ ಪ್ರಾಣಿ, ಪಕ್ಷಿ ಹಾಗೂ ವಿಜ್ಞಾನ ಪ್ರಪಂಚ ಕುರಿತು, ಜ್ಞಾನಕೋಶಗಳನ್ನೇ ರಚಿಸಿದ್ದಾರೆ. ಒಂಬತ್ತು ಸಾವಿರ ಪ್ರಾಣಿ ಪಕ್ಷಗಳ ಚಿತ್ರಗಳನ್ನು ಅವರು ಬಿಡಿಸಿದ್ದಾರೆ. ವರಕವಿ ದ.ರಾ. ಬೇಂದ್ರೆ ಅವರು ಸಂಖ್ಯಾಶಾಸ್ತ್ರದ ಬಗ್ಗೆ ವಿಫುಲವಾಗಿ ಬರೆದಿದ್ದಾರೆ. ರಾಷ್ಟ್ರಕವಿ ಕುವೆಂಪು ಭೌತಶಾಸ್ತ್ರದ ಬಗ್ಗೆ ಅಪಾರ ಜ್ಞಾನ ಪಡೆದು, ಅಭಿವ್ಯಕ್ತಿಸಿರುವುದು ಉತ್ತಮ ನಿದರ್ಶನ, ಎಂದರು.

ಶ್ರೇಷ್ಠ ವೈದ್ಯ ಸಾಹಿತಿ ಪ್ರಶಸ್ತಿಯನ್ನು, ಡಾಕ್ಟರ್ ಸುರೇಶ ಸಗರದ ಹಾಗೂ ಡಾಕ್ಟರ್ ಸುನಂದಾ ಕುಲಕರ್ಣಿ ಅವರಿಗೆ, ಗಣ್ಯರು ಪ್ರದಾನ ಮಾಡಿ, ಗೌರವಿಸಿದರು.

<><><>

ಧಾರವಾಡದ ಸಾಹಿತ್ಯ ಭವನದ ದ.ರಾ.ಬೇಂದ್ರೆ ವೇದಿಕೆಯಲ್ಲಿ, ಇಂದು 'ಕಾವ್ಯ ಸಂಸ್ಕೃತಿ ಯಾನ, ಜನರೆಡೆಗೆ ಕಾವ್ಯ' – ಕವಿ ಸಮ್ಮೇಳನ ಆಯೋಜಿತವಾಗಿದೆ. ಬೆಂಗಳೂರಿನ ರಂಗಮಂಡಲ, ರಂಗ ಪರಿಸರ ಹಾಗೂ ಚೇತನಾ ಫೌಂಡೇಷನ್ ಆಶ್ರಯದಲ್ಲಿ ಆಯೋಜಿತ, ಕವಿ ಸಮ್ಮೇಳನವನ್ನು ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಪುರಸ್ಕೃತ, ಹಿರಿಯ ಕವಿ, ಡಾಕ್ಟರ್ ಮೂಡ್ನಾಕೂಡು ಚಿನ್ನಸ್ವಾಮಿ ಉದ್ಘಾಟಿಸಲಿದ್ದಾರೆ. ಹೊಸ ದಿಲ್ಲಿಯ ಕೇಂದ್ರ ಸಾಹಿತ್ಯ ಅಕಾದೆಮಿಯ ಸದಸ್ಯರು ಹಾಗೂ ಹಿರಿಯ ಕಥೆಗಾರ, ಡಾಕ್ಟರ್ ಬಸವರಾಜ ಸಾದರ, ಈ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಅವರು ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

<u>ಡಾಕ್ಟರ್ ಬಸವರಾಜ ಸಾದರ ಧ್ವನಿ– 42 ಸೆಕೆಂದುಗಳು</u>

<><><>

ಆಕಾಶವಾಣಿಯ ಜನಪ್ರಿಯ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ, ಇಂದು ಬೆಳಗ್ಗೆ 11 ಗಂಟೆಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ದೇಶದ ಜನತೆಯೊಂದಿಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಲಿದ್ದಾರೆ. ಇದು ಮನದ ಮಾತು ಕಾರ್ಯಕ್ರಮದ 113ನೇ ಆವೃತ್ತಿಯಾಗಿದೆ. ಮನ್ ಕಿ ಬಾತ್ ಕಾರ್ಯಕ್ರಮದ ನಂತರ, ಆಯಾ ಪ್ರಾದೇಶಿಕ ಭಾ ಽಗಳಲ್ಲಿ ಕಾರ್ಯಕ್ರಮ ಮೂಡಿಬರಲಿದೆ.

<><><>

ಕರ್ನಾಟಕ ಲೋಕಾಯುಕ್ತ ಸಂಸ್ಥೆ ಉದ್ದೇಶ, ಸಾರ್ವಜನಿಕರ ಹಕ್ಕುಗಳ ಉಲ್ಲಂಘನೆಯಾಗದಂತೆ ಕಾಪಾಡುವುದು ಎಂದು, ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ ಹೇಳಿದ್ದಾರೆ. ವಿಜಯಪುರದಲ್ಲಿ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ, ಅವರು ಮಾತನಾಡಿದರು. ಕಾನೂನಿನ ಬಗ್ಗೆ ಶ್ರೀ ಸಾಮಾನ್ಯರಲ್ಲಿ ಜಾಗೃತಿ ಮೂಡಿಸಿ, ನ್ಯಾಯ ದೊರಕಿಸಿ ಕೊಡುವ ಜವಾಬ್ದಾರಿ ನ್ಯಾಯಾಂಗದ ಮೇಲಿದೆ ಎಂದರು. ಬಳಿಕ, ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ ಅವರು ಪರಿಶೀಲಿಸಿದರು.

<><><>

ಮೀನುಗಾರರು ಅಪಾಯಕ್ಕೆ ಸಿಲುಕಿ, ಮರಣ ಹೊಂದಿದಲ್ಲಿ, ಪರಿಹಾರದ ಮೊತ್ತವನ್ನು 6 ಲಕ್ಷ ದಿಂದ 8 ಲಕ್ಷ ರೂಪಾಯಿಗೆ ನಿಗದಿ ಪಡಿಸಲಾಗಿದೆ ಎಂದು,  ಮೀನುಗಾರಿಕೆ ಖಾತೆ ಸಚಿವ ಮಂಕಾಳ ವೈದ್ಯ ತಿಳಿಸಿದ್ದಾರೆ. ವಿಜಯನಗರ ಜಿಲ್ಲೆಯ ಮೀನುಗಾರರೊಂದಿಗೆ ಸಂವಾದ ನಡೆಸಿ, ಮಾತನಾಡಿದ ಸಚಿವರು, ಒಳ ನಾಡು ಮೀನು ಸಾಕಾಣಿಕೆಗಾಗಿ, ಕೆರೆಗಳನ್ನು ಟೆಂಡರ್ ಮೂಲಕ ಹರಾಜು ಹಾಕುವುದರಿಂದ, ಮೀನುಗಾರರ ಹಿತಕಾಯಲು ಸಾಧ್ಯ. ಸರ್ಕಾರಕ್ಕೂ ಸೂಕ್ತ ಆದಾಯ ಖಾತ್ರಿ ಪಡಿಸಬಹುದು ಎಂದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಬಾಲ್ಯ ವಿವಾಹದಿಂದ ಉಂಟಾಗುವ ದು ್ಪರಿಣಾಗಳ ಕುರಿತು ಮಕ್ಕಳಿಗೆ ಹಾಗೂ ಬಾಲ್ಯ ವಿವಾಹ ನಿ ೀಧ ಕಾಯ್ದೆ ಕುರಿತು ಪಾಲಕರಿಗೆ, ಜಾಗೃತಿ ಮೂಡಿಸಬೇಕು ಎಂದು, ಹಾವೇರಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಆರ್.ಮುತಾಲಿಕ ದೇಸಾಯಿ ಸೂಚಿಸಿದ್ದಾರೆ.

<><><>

ದೊಡ್ಡಬಳ್ಳಾಪುರದಲ್ಲಿ, ಮೂವರು ಕಿಶೋರ ಕಾರ್ಮಿಕರನ್ನು ರಕ್ಷಿಸಲಾಗಿದ್ದು, ಮಕ್ಕಳ ಕಲ್ಯಾಣ ಸಮಿತಿಗೆ ಹಾಜರು ಪಡಿಸಲಾಗಿದೆ.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಸೆಪ್ಟೆಂಬರ್ 23 ರಂದು ಕಲಬುರಗಿಯಲ್ಲಿ "ಜನಸ್ಪಂದನಾ" ಸಭೆ ನಡೆಸಲಿದ್ದಾರೆ. ಬಾಕಿ ಇರುವ ಕಡತಗಳನ್ನು ಶೀಘ್ರ ವಿಲೇವಾರಿ ಮಾಡುವಂತೆ, ಜಿಲ್ಲಾಧಿಕಾರಿ ಎಲ್ಲ ಇಲಾಖೆಗಳ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

<><><>